ಮನೀಷಾ ಪಂಚಕದಿಂದ

ಯಾ ತಿರ್ಯಙ್‌ನರದೇವತಾಭಿರಹಮಿತ್ಯಂತಃ ಸ್ಫುಟಾ ಗೃಹ್ಯತೇ
ಯದ್ಭಾಸಾ ಹೃದಯಾಕ್ಷದೇಹವಿಷಯಾ ಭಾಂತಿ ಸ್ವತೋಽಚೇತನಾಃ ।
ತಾಂ ಭಾಸ್ಯೈಃ ವಿಹಿತಾರ್ಕಮಂಡಲನಿಭಾಂ
ಸ್ಫೂರ್ತಿಂ ಸದಾ ಭಾವಯನ್
ಯೋಗೀ ನಿರ್ವೃತಮಾನಸೋ ಹಿ ಗುರುರಿತ್ಯೇಷಾ ಮನೀಷಾ ಮಮ॥

"ಯಾವ ಚೈತನ್ಯಪ್ರಕಾಶವನ್ನು ಪ್ರಾಣಿಜಂತುಗಳು, ಮನುಷ್ಯರು, ದೇವತೆಗಳು – ಎಲ್ಲರೂ 'ನಾನು' ಎಂದು ಸ್ಪಷ್ಟವಾಗಿ ಗ್ರಹಿಸುತ್ತಿರುವರೋ, ಯಾವುದರ ಪ್ರಕಾಶದಿಂದ ಮನಸ್ಸು, ಇಂದ್ರಿಯಗಳು, ದೇಹ, ವಿಷಯ ವಸ್ತುಗಳು – ಇವು ತಾವು ಅಚೇತನವಾಗಿದ್ದರೂ ಬೆಳಗುತ್ತಿರುವವೋ, ಪ್ರಕಾಶಿಸಲ್ಪಡುತ್ತಿರುವ ವಸ್ತುಗಳಿಂದ ಮರೆಯಾಗಿರುವ ಸೂರ್ಯ ಮಂಡಲನಂತೆ ಯಾವುದು ಇರುವುದೋ, ಅಂತಹ ಆ ಚೈತನ್ಯ ಪ್ರಕಾಶ ವನ್ನು ಸದಾ ಚಿಂತಿಸುತ್ತಾ, ಮನದಲ್ಲಿ ಆನಂದದಿಂದ ಇರುತ್ತಿರುವ ಜ್ಞಾನ ಯೋಗಿಯೇ ಗುರುವು ಎನ್ನುವುದು ನನ್ನ ಅಭಿಪ್ರಾಯ."

ಮಹಾಪುರುಷರ ಆದರ್ಶ

ಗುರಿಯನ್ನು ಸೇರಿದ ಮಹಾಪುರುಷರ ಬಾಳಿನಂತೆ ನಮ್ಮ ಜೀವನವನ್ನು ನಾವು ರೂಢಿಸಿಕೊಳ್ಳಬೇಕು. ಪ್ರಪಂಚದ ಮೇಲೆ ಜುಗುಪ್ಸೆ, ಭಗವಂತನನ್ನು ಪಡೆಯಬೇಕೆಂಬ ತೀವ್ರ ಆಕಾಂಕ್ಷೆ– ಎರಡೇ ಸಾಲದು. ಗುರುವಿನಿಂದ ಉಪದೇಶ ಅವಶ್ಯಕ. ಏತಕ್ಕೆ? ಇದರಿಂದ ಆ ಶಕ್ತಿಮೂಲಕ್ಕೆ ಸಂಬಂಧವನ್ನು ಕಲ್ಪಿಸಿಕೊಳ್ಳುವಿರಿ. ಹಲವು ತಲೆಮಾರುಗಳಿಂದ ಗುರುವಿನಿಂದ ಶಿಷ್ಯನಿಗೆ ಈ ಶಕ್ತಿಯು ಅಖಂಡವಾಗಿ ಹರಿದುಬಂದಿದೆ. ಶಿಷ್ಯನು ಗುರುವನ್ನು ಮಾರ್ಗದರ್ಶಕ, ಸ್ನೇಹಿತ, ತತ್ತ್ವದರ್ಶಿ ಎಂದು ಸ್ವೀಕರಿಸಬೇಕು.

– ಸ್ವಾಮಿ ವಿವೇಕಾನಂದ

ಮಹಾವ್ಯಕ್ತಿಯ ಲಕ್ಷಣ

ತನ್ನೆಲ್ಲ ಮಹಾನತೆಯನ್ನು ಪ್ರದರ್ಶಿಸಬಲ್ಲವನು ಮಹಾವ್ಯಕ್ತಿಯಾಗಲಾರ; ಆದರೆ ತನ್ನ ಮಹಾನತೆಯ ಬಗ್ಗೆ ವಿನಯವನ್ನು ತೋರಬಲ್ಲವನು ಮಾತ್ರವೇ ಮಹಾವ್ಯಕ್ತಿಯಾಗಬಲ್ಲ.

– ಅನಾಮಿಕ

ಒಬ್ಬ ಮಹಾನ್‌ವ್ಯಕ್ತಿಯಲ್ಲಿ ಕಂಡುಬರುವ ಗುಣಗಳೆಂದರೆ ದೂರದೃಷ್ಟಿ, ವ್ಯಕ್ತಿತ್ವದ ಸಮಗ್ರತೆ, ಧೈರ್ಯ, ಗ್ರಹಿಕೆ, ಭಾಷಣ ಕ್ಷಮತೆ ಮತ್ತು ಚಾರಿತ್ರ್ಯದ ಗಾಢತೆ.

– ಡ್ವೈಟ್ ಡೇವಿಡ್ ಐಸೆನ್‌ಹೋವರ್

ಪ್ರತಿಯೊಬ್ಬ ಮಹಾವ್ಯಕ್ತಿಯೂ, ಪ್ರತಿಯೊಬ್ಬ ಯಶಸ್ವೀ ವ್ಯಕ್ತಿಯೂ – ತನ್ನ ಕಾರ್ಯಕ್ಷೇತ್ರ ಯಾವುದೇ ಇರಲಿ – ಈ ಮುಂದಿನ ಮಾತುಗಳಲ್ಲಿರುವ ಪವಾಡವನ್ನು ಅರಿತಿರುತ್ತಾನೆ – "ಪ್ರತಿಯೊಂದು ವೈಫಲ್ಯವೂ ಅದಕ್ಕೆ ಸಮನಾದ ಅಥವಾ ಅದಕ್ಕಿಂತಲೂ ಹೆಚ್ಚಿನ ಲಾಭದ ಬೀಜವಾಗಿದೆ."

– ಡಬ್ಲ್ಯು. ಕ್ಲೆಮೆಂಟ್ ಸ್ಟೋನ್

ಮಹಾವ್ಯಕ್ತಿಯೊಬ್ಬನು ಪ್ರತಿಯೊಂದು ಕೆಲಸವನ್ನೂ, ಅದನ್ನು ಮೊಟ್ಟಮೊದಲ ಬಾರಿಗೆ ಮಾಡುತ್ತಿರುವಂತೆ ಮಾಡುತ್ತಾನೆ.

– ಅಲೆಕ್ಸಾಂಡರ್ ಸ್ಮಿತ್

ಒಬ್ಬ ನೈಜ ಮಹಾವ್ಯಕ್ತಿಯನ್ನು ಮೂರು ಸಂಕೇತಗಳಿಂದ ಗುರುತಿಸಬಹುದು: ಯೋಜನೆಯಲ್ಲಿ ಉದಾರತೆ, ಕಾರ್ಯರೂಪಕ್ಕೆ ತರುವಲ್ಲಿ ವಿನಯತೆ ಮತ್ತು ಯಶಸ್ಸಿನಲ್ಲಿ ಸೌಮ್ಯತೆ.

– ಒಟ್ಟೋ ವಾನ್ ಬಿಸ್‌ಮಾರ್ಕ್

ನಮ್ಮ ಸ್ವಂತಸುಖದ ಬಗ್ಗೆ ಮಾತ್ರ ಗಮನ ಕೊಡುವುದು ಬಹಳ ಕೀಳುದರ್ಜೆಯ ಸುಖವಾಗಿದೆ. ಮಹಾವ್ಯಕ್ತಿಯಾದ ಒಬ್ಬನು ಶ್ರೇಷ್ಠಮಟ್ಟದ ಸುಖವನ್ನು ಅನುಭವಿಸುತ್ತಾನೆ. ಅಂತಹ ಸುಖವನ್ನು ನಮ್ಮ ಬಗ್ಗೆ ಮತ್ತು ಇಡೀ ಪ್ರಪಂಚದ ಬಗ್ಗೆ ಉದಾರವಾದ ಚಿಂತನೆಗಳನ್ನು ಹಾಗೂ ಭಾವನೆಗಳನ್ನು ಹೊಂದುವುದರಿಂದ ಮಾತ್ರವೇ ನಾವು ಪಡೆದುಕೊಳ್ಳಬಹುದು.

– ಜಾರ್ಜ್ ಎಲಿಯಟ್